**O.S No.** 494/2015

ಪಿ. ಡಬ್ಲ್ಯೂ-1

ದಿನಾಂಕಃ 17-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ</u>**

ನಾನು ಅನಕ್ಷರಸ್ತೆ. ನಾನೇ ಸಣ್ಣಬೀರೆಗೌಡರ ಮಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಏನೂ ದಾಖಾಲತಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲಾತಿಯ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆ ಹುಡೂ ವ ಕಾಲಕ್ಕೆ ಸಣ್ಣ ಬೀರೆಗೌಡರು ಮನೆ ಮತ್ತು ಆಸ್ತಿಯ ದಾಖಲಾತಿಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಮನೆಗೆ ಸಂದಂಧಿಸಿದ ದಾಖಲಾತಿಗಳನ್ನು ಎಲ್ಲಿಂದ ತಂದು ಒದಗಿಸಿದೀರಿ ಎಂದರೆ ಸಾಕ್ಷಿ ತಾಲ್ಲೂಕು ಕಚೇರಿಯಿಂದ ತಂದಿದ್ದು ಎಂದು ಹೇಳುತ್ತಾರೆ.

ಮನೆಗೆ ಸಂಬಂಧಿಸಿದ ದಾಖಲಾತಿಗಳನ್ನು ತಾಲ್ಲೂಕು ಕಚೇರಿಯಲ್ಲಿ ಸಿಗುವುದಿಲ್ಲ ಎಂದರೆ ಸಾಕ್ಷಿ ಸಿಗುತ್ತದೆ ಎಂದು ಹೇಳುತ್ತಾರೆ. ತಾಲ್ಲೂಕು ಕಚೇರಿಗಳಲ್ಲಿ ಪಹಣಿ , ಎಂ ಆರ್ ಇತೆರ ದಾಖಲಾತಿಗಳು ಸಿಗುತ್ತವೆ ಮನೆಗೆ ಸಂಬಂಧಿಸಿದಂತೆ ದಾಖಲಾತಿಗಳು ಸಿಗುತ್ತವೆ ಎಂದರೆ ಸಾಕ್ಷಿ ನನ್ನ ಮಗ ತೆಗೆದುಕೊಂಡು ಬಂದನು ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ದಾಖಲಾತಿಗಳನ್ನು ನಿಮ್ಮ ಮಗನಿಂದ ಒದಗಸಿದ್ದೇನೆ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಹುಟ್ಟಿ ಬೆಳೆದ ಮನೆಯಲ್ಲಿ ಯಾರು ವಾಸ ಇದ್ದಾರೇ ಎಂದರೆ ಸಾಕ್ಷಿ ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ವಾಸ ಇದ್ದಾರೆ ಎಂದು ಹೇಳುತ್ತಾರೆ. ಸದರಿ ಮನೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳಲ್ಲಿ ,

ಮನೆಗೆ ಸಂಬಂಧಿಸಿದ ದಾಖಲಾತಿಗಳು ಯಾವುದು , ಜಮೀನಿಗೆ ಸಂಬಂಧಿಸಿದ ದಾಖಲಾತಿಗಳು ಯಾವುದು ಎಂದು ನೋಡಿ ಹೇಳಲಾಗುತ್ತದೆಯೇ ಎಂದರ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ನೀವು ಸಣ್ಣಬೀರೇಗೌಡರ ಮಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 2 ರಲ್ಲಿನ ಸರ್ವೇ ನಂಬರ್ 7/1 ಬಿ ಹಿಂದೇ ಸಣ್ಣಬೀರೇಗೌಡರ ಹೆಸರಿನಲ್ಲಿ ಇತ್ತಾ ಎಂದರೆ ಸಾಕ್ಷಿ ಏನೂ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-7 ರಲ್ಲಿ ಖಾತೆದಾರರು ಮೀರಜ್ ಅಬ್ದುಲ್ಲಾ ಹಪೀಜ್ ಎಂದು ನಮೂದ್ದು, ಅವರನ್ನು ಪಕ್ಷಗಾರರಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

**O.S** 6/2013

**DW**1

ದಿನಾಂಕ:**24-08-2022** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ವಾದಿ ರವರ ಪರ ಶ್ರೀ ಸಿ ಎಸ್ ಎಸ್ ವಕೀಲರಿಂದ:**

ವಾದಿ **1** ರಿಂ ದ **3** ರವರ ತಾಯಿ ಹೆಸರು ಬಸಮ್ಮಣಿ ಎಂದರೆ ಸರಿ. ದಾವಾ ಆಸ್ತಿ ತಮ್ಮಯ್ಯಪ್ಪ ಸಾಗುವಳಿ ಮಾಡುತ್ತಿದ್ದರಿಂದ ವಾದಿಯರ ತಾಯಿಯ ಹೆಸರಿಗೆ ಒಟ್ಟು ಕುಟುಂಬದ ಪರವಾಗಿ ದಾವಾ ಆಸ್ತಿಯನ್ನಉ ಮಂಜೂರು ಮಾಡಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ನಮೂನೆ 10 ರ ದೃಡೀಕೃತ ನಕಲು ಪ್ರತಿಯನ್ನು ತೋರಿಸಿ ಅದರಂತೆ ದಾವಾ ಆಸ್ತಿಯ ನಕಲನ್ನು ಮಂಜೂರು ಮಾಡಲಾಗಿತ್ತು ಎಂರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ಗಳ ಸಮಕ್ಷಮದಲ್ಲಿ 1 ನೇ ವಾದಿ ~~2~~-3 ಬಾರಿ ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನ್ಯಾಯಾ ಯದಿಂದ ದಾವಾ ಆಸ್ತಿಯನ್ನು ಅಳತೆ ಕಾಯ ಮಾಡಿಸಲು ತಕರಾರು ಇದೆ ಎಂದರೆ ಸಾಕ್ಷಿ ನಮ್ಮ ಮನೆಯ ಹೊರತು ಪಡಿಸಿ ಅಳಿಯಲಿ ಎಂದು ಹೇಳುತ್ತಾರೆ. ನೀವು ವಾಸ ಇರುವ ಮನೆ ವಾದಿಯರ ಅನುಮತಿ ಮೇರೆಗೆ ಇರುವುದು ಎಂದರೆ ಸರಿಯಲ್ಲ. ವಾದಿಯರಾ ಅನುಮತಿ ಮೇರೆಗ ನೀವು ಮಎನೆಯಲ್ಲಿಪ ವಸಾ ಇದ್ದು ವಾದಿಯರು ಮನೆಯನ್ನು ಬಿಟ್ಟು ಕುಡುಡ ಎಂದು ಕೇಳಿದ್ದರು ನೀವು ವುನೆ ಬಟ್ಟು ಕೊಟ್ಟಿರುವುದಿಲ್ಲ ಎಂದರೆ ಸಾಕಿ ಅದು ನಮ್ಮ ಮನೆ ನಾವು ಸ್ವಾ ಗಧೀನ ಇದ್ದೇವೆ ಎಂದು ಹೇಳುತ್ತಾರೆ. ನೀವು ಅಕ್ರಮವಾಗಿ ಮನೆಯಲ್ಲಿ ವಾಸ ಇದ್ದೀರಿ ಎಂದರೆ ಸುಳ್ಳು. ವಾದಿಯರಿಗೆ ಮನೆ ಬಿಟ್ಟು ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಅಕ್ರಮ ವಾಯಿದೆ ಹೊಂದುವುದಕ್ಕೆ ನ್ಯಾಯಾಯದ ಮುಂದೆ ಸುಳ್ಳು ಸಾಕ್ಷ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.